**ದಿನಾಂಕ: 06.03.2025 ರಂದು ಸಾಕ್ಷಿಧಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**:ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ.ಎಫ್ ಬಿ ಎಂ ವಕೀಲರಿಂದ :**

5. ನನ್ನ ಅಜ್ಜ ಮರಣ ಹೊಂದುವವರೆಗೂ ದಾವಾ ಅನುಸೂಚಿ 2 ಆಸ್ತಿಗಳು ಒಟ್ಟು ಕುಟುಂಬದಲ್ಲಿಯೇ ಇದ್ದವು ಎಂದರೆ ಸರಿಯಲ್ಲ. ದಾವಾ ಅನುಸೂಚಿ 2 ಎ ಯಿಂದ 2 ಹೆಚ್ ಅಖಂಡ ಆಸ್ತಿಗಳು ಆಗಿರುವುದಿಲ್ಲ ಅವುಗಳು ವಿಭಾಗವಾಗಿರುತ್ತವೆ. ದಾವಾ ಅನುಸೂಚಿ 2 ಬಿ ರ ಆಸ್ತಿಯ ಚಕ್ಕುಬಂದಿ ನನಗೆ ಗೊತ್ತಿಲ್ಲ. ದಾವಾ ಅನುಸೂಚಿ 2 ಎ, ಸಿ ಯಿಂದ ಹೆಚ್ ರ ಅಸ್ತಿಗಳ ಚಕ್ಕುಬಂದಿ ನನಗೆ ಗೊತ್ತಿಲ್ಲ. ಈ ಹಿಂದೆ ವಿಪಿಸಿ 1 ರ ಆಸ್ತಿ ರೈಸ್ ಮಿಲ್ ಮತ್ತು ಅದಕಕ್ಷ್ ಹೊಂದಿಕೊಂಡತೆ ಖಾಲಿ ಜಾಗ ಇತ್ತು ಎಂದರೆ ಸರಿ. ಈ ಹಿಂದೆ ಆ ಆಸ್ತಿ ನನ್ನ ಅಜ್ಜ ಮತ್ತು ನನ್ನ ತಂದೆಯ ಹೆಸರಿನಲ್ಲಿ ಏಕತ್ರ ಧಾರಣದ ಪರವಾಗಿ ಖಾತೆ ಇತ್ತು ಎಂದರೆ ಸರಿ. ಆ ನಂತರ ಆ ಆಸ್ತಿ ರಾಜು ಮತ್ತು ಪ್ರಭು ರವರ ಹೆಸರಿಗೆ ದಾಖಲೆಗಳು ಆಯಿತು ಆದರೆ ಯಾವ ದಾಖಲೆ ಆಧಾರದ ಮೇಲೆ ಮಾಡಲಾಯಿತು ಎಂಬುದು ನನಗೆ ಗೊತ್ತಿಲ್ಲ. ಆ ರಾಜು ಎಂಬ ವ್ಯಕ್ತಿ 7 ನೇ ಪ್ರತಿವಾದಿ ಆಗಿರುತ್ತಾರೆ. ಆ ಆಸ್ತಿಯ ಖಾತೆಯು 1993 ರಂದು ಬದಲಾವಣೆಯಾಗಿರುತ್ತದೆ. ಆ ಆಸ್ತಿ 7 ನೇ ಪ್ರತಿವಾದಿ ಹೆಸರಿಗೆ ವರ್ಗಾವಣೆ ಮಾಡುವ ಸಂದರ್ಭದಲ್ಲಿ ದಾಖಲೆಗಳು ನೋಂದಾಗಿದ್ದವು. ಆ ನೋಂದಾಯಿತ ದಾಖಲೆಯನ್ನು ನ್ಯಾಯಾಲಯಕ್ಕೆ ತಂದು ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ಈ ರೀತಿ ದಾಖಲೆ ನೋಂದಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ವಿ ಪಿ ಸಿ 1 ರ ಆಸ್ತಿಯ ವಿಸ್ತೀರ್ಣ 1 ಎಕರೆ ಇದ್ದು ಅದರಲ್ಲಿ ಒಂದು ಹಳೆಯದಾದ ಕಟ್ಟಡ ಇತ್ತು ಎಂದರೆ ಸರಿ. ಆ ಮಿಲ್ ನ ಮೇಲೆ ಸಾಲ ಇತ್ತೋ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ಆ ಮಿಲ್ ನ್ನು ನನ್ನ ತಂದೆಯವರು ಎಂದೂ ಸಹ ಮಾರಾಟ ಮಾಡಿರುವುದಿಲ್ಲ. ನನ್ನ ಅಜ್ಜ ಶಿವಪುತ್ರಪ್ಪನವರು ತನ್ನ ಜೀವಿತ ಅವಧಿಯಲ್ಲಿ ದಾವಾ ದಾವಾ ಅನುಸೂಚಿ 2 ಜೆ ರ ಆಸ್ತಿಯಲ್ಲಿಯೂ ಸಹ ವಾಸವಾಗಿದ್ದರು. ಆ ಸಂದರ್ಭದಲ್ಲಿ ನಾವುಗಳು ಒಟ್ಟಿಗೆ ವಾಸವಾಗಿದ್ದೆವು. ದಾವಾ ದಾವಾ ಅನುಸೂಚಿ 2 ಕೆ ರ ಆಸ್ತಿ ನನ್ನ ತಂದೆಯ ಹೆಸರಿನಲ್ಲಿದೆ.

6. ಈ ಆಸ್ತಿಯನ್ನು ನನ್ನ ತಂದೆ ಶಿವಪುತ್ರಪ್ಪ ಲಪಾಟಿ ಎಂಬುವವರಿಗೆ ಮಾರಾಟ ಮಾಡಿರುತ್ತಾರೆ. ದಾವಾ ದಾವಾ ಅನುಸೂಚಿ 2 ಜೆ ರ ವಿ ಪಿ ಸಿ ನಂಬರ 391/ಬ ರ ಆಸ್ತಿ ನನ್ನ ತಂದೆಯ ಹೆಸರಿನಲ್ಲಿದ್ದು ಅದನ್ನು ಶಿವಪುತ್ರಪ್ಪ ಲಪಾಟಿಯವರಿಗೆ ರೂ 70 ಸಾವಿರಕ್ಕೆ ಮಾರಾಟ ಮಾಡಿರುತ್ತಾರೆ. ಆ ಆಸ್ತಿಯ ಮೇಲೆ ಬ್ಯಾಂಕ್ ಸಾಲ ಇದ್ದ ಕಾರಣ ಒಟ್ಟು ಕುಟುಂಬದ ಪರವಾಗಿ ಮಾರಾಟ ಮಾಡಿರುವುದಾಗಿ ನನ್ನ ತಂದೆಯವರು ನನಗೆ ತಿಳಿಸಿದರು. ವಿ ಪಿ ಸಿ ನಂಬರ 175/2 ರ ಆಸ್ತಿ ನನ ಚಿಕ್ಕಪ್ಪ ಚಂದ್ರಕಾಂತ ಸತ್ಯಪ್ಪನವರ ಹೆಸರಿನಲ್ಲಿ ಇತ್ತು. ನನ್ನ ಅಜ್ಜ ಜೀವಂತ ಇದ್ದಾಗ ನಮ್ಮ ಕುಟುಂಬದ ಏಕತ್ರ ಗರಾಣೆ ವ್ಯವಹಾರಗಳನ್ನು ನನ್ನ ಅಜ್ಜ ಮತ್ತು ನನ್ನ ತಂದೆಯೇ ಕೂಡಿ ಮಾಡುತ್ತಿದ್ದರು. ನಮ್ಮ ಹಿಸ್ಸೆಗೆ ಬಂದಿವೆ ಎಂದು ಆಧರಿಸುವ ಜಮೀನುಗಳಲ್ಲಿ ಬೋರವೆಲ್ ಗಳಿದ್ದು ಫಲವತ್ತಾದ ಜಮೀನುಗಳು ಆಗಿರುವುದಿಲ್ಲ. ನಮ್ಮ ಜಮೀನುಗಳಲ್ಲಿ ಬೋರ ವೆಲ್ ಗಳು ಇವೆ. ಆ ಜಮೀನುಗಳಲ್ಲಿ ಅಡಿಕೆ ಮತ್ತು ಮಾವಿನ ತಪ್ಪಲುಗಳನ್ನು ಬೆಳೆಸಿರುವುದಿಲ್ಲ. ಆ ಜಮೀನಿನಲ್ಲಿ ಹತ್ತಿ ಮತ್ತು ಗೋವಿನ ಜೋಳ ಬೆಳೆಯುತ್ತೇವೆ. ನನ್ನ ಚಿಕ್ಕಪ್ಪ ಚಂದ್ರಕಾಂತರವರ ಹಿಸ್ಸೆಗೆ ಬಂದಿರುತ್ತವೆ ಎಂದು ಆಧರಿಸುವ ಜಮೀನುಗಳು ಫಲವತ್ತಾದ ಜಮೀನುಗಳು ಇದ್ದವೋ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ಈ ಜಮೀನುಗಳು ನೀರಾವರಿ ಜಮೀನುಗಳು ಇವೆಯೋ ಅಥವಾ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ಸರ್ವೆ ನಂಬರ 175/2 ರ ಆಸ್ತಿಯನ್ನು ವಾದಿ ಮತ್ತು ನನ್ನ ಅಜ್ಜ ಕೂಡಿಯೇ ಅವರ ಹಿಸ್ಸೆಗೆ ಬಂದ ನಂತರ ಮಾರಾಟ ಮಾಡಿರುತ್ತಾರೆ. ಅವರ ಹಿಸ್ಸೆಗೆ ಬಂದ ನಂತರ ಮಾರಾಟ ಮಾಡಿರುತ್ತರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶಿವಮೊಗ್ಗದಲ್ಲಿರುವ ಆಸ್ತಿಯನ್ನು ವಾದಿ ಮತ್ತು ನನ್ನ ಅಜ್ಜ ಖರೀದಿಸಿದ್ದೇವೆ ಎಂದು ಆಧರಿಸುವ ಆಸ್ತಿಯನ್ನು ಆತ ಮೃತ ಪಟ್ಟ ನಂತರ ನಮ್ಮ ಹೆರಿಗೆ ದಾಖಲೆ ಮಾಡಿಸಿಕೊಳ್ಳಲು ಪ್ರಯತ್ನಿಸಿರುವುದಿಲ್ಲ. ಶಿವಮೊಗ್ಗದಲ್ಲಿರುವ ಆಸ್ತಿ ವಾದಿಯ ಗಂಡನ ತಾಯಿಯ ಆಸ್ತಿ ಆಗಿರುತ್ತದೆ. ಶಿವಮೊಗ್ಗದಲ್ಲಿರುವ ಆಸ್ತಿಯ ಮೇಲೆ ವಾದಿಯ ಗಂಡ ಮತ್ತು ಆತನ ತಾಯಿ ಎಸ್ ಬಿ ಎಂ ಶಿವಮೊಗ್ಗ ಶಾಖೆಯಿಂದ ಸಾಲ ಪಡೆದುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಎಸ್ ಬಿ ಎಂ ಶಿವಮೊಗ್ಗದ್ದವರು ಆ ಆಸ್ತಿಯನ್ನು ಮುಟ್ಟುಗೋಲು ಹಾಕಿಕೊಳ್ಳಲು ಪ್ರಯತ್ನ ಪಟ್ಟ ಸಂದರ್ಭದಲ್ಲಿ ನನ್ನ ಅಜ್ಜ ತನ್ನ

ಮತ್ತು ವಾದಿಯ ಹೆಸರಿನಲ್ಲಿ ತೋರಗಾಣಿಕೆಗಾಗಿ ಕ್ರಯ ಪತ್ರ ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ.

7. ದಾವಾ ಆಸ್ತಿಗಳಲ್ಲಿ ವಾದಿಗೂ ಸಹ ಹಿಸ್ಸೆ ಹಕ್ಕು ಇದ್ದು ಶಿವಪುತ್ರಪ್ಪ ಹಾಗೂ ಅವರ ಮಕ್ಕಳುಗಳ ನಡುವೆ ಎಂದೂ ಸಹ ಹಿಸ್ಸೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಈಗಲೂ ಸಹ ದಾವಾ ಆಸ್ತಿಗಳಲ್ಲಿ ವಾದಿಯೂ ಸಹ ನಮ್ಮ ಜೊತೆ ಸಾಮೂಹಿಕವಾಗಿ ವಹಿವಾಟು ಮಾಡುತ್ತಾ ಬಂದಿದ್ದಾರೆ ಎಂದರೆ ಸರಿಯಲ್ಲ. ವಾದಿಗೆ ಹಿಸ್ಸೆ ಕೊಡುವುದರಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಈಗಾಗಲೇ ಹಿಸ್ಸೆ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಪರವಾಗಿ ಮಾತ್ರ ಸಾಕ್ಷಿ ವಿಚಾರಣೆ ನುಡಿಯುತ್ತಿದ್ದೇನೆ ನಾನು ಮತ್ತು 2 ನೇ ಪ್ರತಿವಾದಿ ದಾವಾ ಆಸ್ತಿಗಳಲ್ಲಿ ವಾದಿಯ ಹಿಸ್ಸೆಯನ್ನು ಎತ್ತಿಹಾಕಿಕೊಳ್ಳಬೇಕೆಂದು ಹವಣಿಸುತ್ತಿದ್ದೇವೆ ಎಂದರೆ ಸರಿಯಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರ ಮತ್ತು ಲಿಖಿತ ಹೇಳಿಕೆಯಲ್ಲಿ ಹೇಳಲಾದ ಎಲ್ಲಾ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

: **ಮರುವಿಚಾರಣೆ** : **ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

**Sd/-**

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು

ಹಾನಗಲ್

ಸಾಕ್ಷಿದಾರರ ಸಹಿ